ಗುಂಡ: ಆತ್ಮಹತ್ಯೆ ಮಾಡಿ ಕೊಳ್ಳುವ ಸಲಹೆ ಪುಸ್ತಕ ಕೊಡಿ.
ಲೈಬ್ರರಿ ಗುಮಾಸ್ತ: ಇಲ್ಲಾ ಸಾರ್ ಕೊಡುವುದಿಲ್ಲ.
ಗುಂಡ: ಅಯ್ಯೋ ಯಾಕೆ?
ಲೈಬ್ರರಿ ಗುಮಾಸ್ತ: ನೀವು ಅದನ್ನು ಓದಿ ಒಂದು ವೇಳೆ ಆತ್ಮಹತ್ಯೆ ಮಾಡಿಕೊಂಡು ಬಿಟ್ಟರೆ ಅದನ್ನು ಹಿಂದಿರುಗಿಸುವವರು ಯಾರು?

★★★

ಹೆಂಡತಿ: ರೀ ಆ ಕಾಮೆಡಿ ಸಿನೆಮಾ ನೋಡಿ ನಕ್ಕು ನಕ್ಕೂ ನನ್ನ ಅರ್ಧಪ್ರಾಣವೇ ಹೋದಂತಾಗಿತ್ತು.
ಗುಂಡ: ಹೌದಾ? ಹಾಗಾದರೆ ಆ ಸಿನೆಮಾನ ಇನ್ನೊಂದು ಸಲ ನೋಡಿ ಬಿಡು.

★★★

ಮಗ: ನಾಳೆ ನಮ್ಮ ಸ್ಕೂಲಿನಲ್ಲಿ ಒಂದು ಚಿಕ್ಕ ಮೀಟಿಂಗ್ ಇದೆ ಅಪ್ಪಾ! ನೀನೂ ಬರಬೇಕಂತೆ.
ತಂದೆ: ಹೌದೇನೋ? ಆ ಮೀಟಿಂಗ್‌ನಲ್ಲಿ ಯಾರು ಯಾರು ಇರ್ತಾರೆ?
ಮಗ: ನಾನು, ನೀನು ಮತ್ತು ನಮ್ಮ ಪ್ರಿನ್ಸಿಪಾಲ್ ಮೂರೇ ಜನ.

★★★

ಹೆಂಡತಿ: ರೀ ಅಡುಗೆ ಏನು ಮಾಡಲೀಂತ ಯೋಚನೆ ಆಗ್ತಿದೆ.
ಗುಂಡ: ನಿನ್ನದೊಂದು ಯೋಚನೆ ಆದರೆ ನನ್ನದೊಂದು ಯೋಚನೆ.
ಹೆಂಡತಿ: ನಿಮ್ಮದೇನು ಯೋಚನೆ?
ಗುಂಡ: ಅದನ್ನು ತಿನ್ನುವುದು ಹೇಗೆ ಅಂತ.

★★★

ಗುಂಡ: ಮೇಡಂ ನಾನು ನಿಮ್ಮಲ್ಲಿರುವ ವೀಣೆ, ಪಿಟೀಲು ಮತ್ತು ತಬಲಗಳನ್ನು ರಿಪೇರಿ ಮಾಡಲು ಬಂದಿದೀನಿ.
ಮೇಡಂ: ನಾನೇನು ನಿನಗೆ ಹೇಳಿ ಕಳಿಸಲಿಲ್ಲವಲ್ಲ?
ಗುಂಡ: ನಿಮ್ಮ ಪಕ್ಕದ ಮನೆಯವರು 'ಅರ್ಜೆಂಟಾಗಿ ಬಾ' ಅಂತ ಕರೆದು ಇಲ್ಲಿಗೆ ಕಳುಹಿಸಿದ್ದಾರೆ.

★★★

ಭಿಕ್ಷುಕ: ತಾಯಿ ನೀವು ಥೇಟ್ ಐಶ್ವರ್ಯ ರೈ ತರನೇ ಕಾಣ್ತೀರಾ, ಹತ್ತು ರೂಪಾಯಿ ಭಿಕ್ಷೆ ಹಾಕಿ.
ಗುಂಡ: ಪಾಪ ಅವನು ಕುರುಡನಿರಬೇಕು. ನೂರು ರೂಪಾಯಿ ಹಾಕಿ ಕಳಿಸು.

★★★

ಹೆಂಡತಿ: ರೀ ನಿಗದಿತ ದಿನಕ್ಕಿಂತ ಮೊದಲೇ ಚೀನಾದಲ್ಲಿ ಮಗು ಜನ್ಮ ತಾಳಿದರೆ ಅದಕ್ಕೆ ಏನೂಂತ ಹೆಸರು ಇಡುತ್ತಾರೆ?
ಗುಂಡ: 'ಸಡನ್ ಲೀ' ಅಂತ.

★★★

ನ್ಯಾಯಾಧೀಶ: ನೀನು ಕಾರನ್ನು ಯಾಕೆ ಕದ್ದೆ?
ಕಳ್ಳ: ನಾನು ಅರ್ಜೆಂಟಾಗಿ ಊರಿಗೆ ಹೋಗಬೇಕಾಗಿತ್ತು. ಅದಕ್ಕೆ.
ನ್ಯಾಯಾಧೀಶ: ಅದರ ಬದಲು ಬಸ್ಸನ್ನು ಯಾಕೆ ಕದಿಯಲಿಲ್ಲ?
ಕಳ್ಳ: ಕದಿಯಬಹುದಿತ್ತು. ಆದರೆ ನನ್ನ ಬಳಿ ಬಸ್ಸಿನ ಡ್ರೈವಿಂಗ್ ಲೈಸೆನ್ಸ್ ಇರಲಿಲ್ಲ ಅದಕ್ಕೆ.

★★★

ಮಗಳು: ಅಮ್ಮಾ ನಾನೆಲ್ಲಿ ಲೆಕ್ಕದ ಪರೀಕ್ಷೆಯಲ್ಲಿ ಪಾಸಾಗ್ತೀನೋ ಇಲ್ಲವೋ ಅಂತ ಹಗಲೂ ರಾತ್ರಿ ಯೋಚನೆ ಮಾಡ್ತಾ ಹೆದರ್ತಾ ಇದ್ದೆಯಲ್ಲ. ಇನ್ನು ಅದರ ಯೋಚನೆ ಬಿಟ್ಟು ಬಿಡು.
ತಾಯಿ: ಯಾಕೆ?
ಮಗಳು: ನಿನ್ನ ಹೆದರಿಕೆ ನಿಜ ಆಗಿ ಬಿಟ್ಟಿದೆ.

★★★

ಗುಂಡ: ಒಂದಲ್ಲಾ ಒಂದು ದಿನ ನಮ್ಮ ಮಗು ಈ ದೇಶದ ಪ್ರಧಾನಿಯಾಗಬಹುದು.
ಹೆಂಡತಿ: ಹೌದೂರೀ! ಇದುವರೆವಿಗೂ ಯಾವ ಮಗುವೂ ಈ ದೇಶದ ಪ್ರಧಾನಿಯಾಗಿರುವುದನ್ನು ನಾನು ನೋಡಿಲ್ಲ.

★★★

ತಾಯಿ: ಮಗಳೇ ಇವತ್ತು ತರಕಾರಿ ಪರೋಟ ಮಾಡಿದೀನಿ. ಒಂದು ಚೂರೂ ಬಿಡದೆ ತಿನ್ನು. ಅದರಲ್ಲಿ ನಿನ್ನ ದೇಹಕ್ಕೆ ಬೇಕಾಗಿರುವ ಕಬ್ಬಿಣಾಂಶ ತುಂಬಾ ಇದೆ.
ಮಗಳು: ಗೊತ್ತಾಗ್ತಾ ಇದೆಯಮ್ಮ! ಅದಕ್ಕೆ ಅದು ಕಬ್ಬಿಣದಷ್ಟೇ ಗಟ್ಟಿಯಾಗಿದೆ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

